ತುಮಕೂರು ಜಿಲ್ಲೆಯ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ತನ್ನು ಒದಗಿಸುವುದು.

1257 -ಶ್ರೀ ಬಿ. ನಂಜಾಮರಿ (ತಿಪಟೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ರೈತರ ಪಂಪುಸೆಟ್ಟುಗಳಿಗೆ ವಿದ್ಯುತನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇನ್ನೂಮುಂದೆ ವಿದ್ಯುತ್ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ತುಮಕೂರು ಜಿಲ್ಲೆಯ 10 ತಾಲ್ಲೂಕುಗಳ ಪೈಕಿ 8 ತಾಲ್ಲೂಕುಗಳನ್ನು ಸರ್ಕಾರದ ಭೂ ಮತ್ತು ಗಣಿ ಇಲಾಖೆಯವರು ಕಪ್ಪು ಮತ್ತು ಭೂದು ತಾಲ್ಲೂಕುಗಳೆಂದು ಘೋಷಿಸಿರುತ್ತಾರೆ. ಕಪ್ಪು ತಾಲ್ಲೂಕುಗಳಾದ ತುಮಕೂರು, ಗುಬ್ಬಿ, ಮಧುಗಿರಿ, ತಿಪಟೂರು, ತುರುವೇಕೆರೆ ಮತ್ತು ಬೂದು ತಾಲ್ಲೂಕುಗಳಾದ ಕುಣಿಗಲ್, ಶಿರಾ, ಕೊರಟಗೆರೆಗಳಲ್ಲಿ ಭೂಮಿ ಅಂತರ್ಜಲವನ್ನು ಹೆಚ್ಚಿನ ಮಟ್ಟದಲ್ಲಿ ಬಳಸಿಕೊಂಡಿರುವುದರಿಂದ ಸರ್ಕಾರದ ಆದೇಶದ ಮೇರೆಗೆ 17.4.97ರಿಂದ ಈಚೆಗೆ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗುತ್ತಿಲ್ಲ. ಆದರೆ ಅನೇಕ ಅರ್ಜಿದಾರರು ತಮ್ಮ ನೀರಾವರಿ ಪಂಪುಸೆಟ್ಟುಗಳನ್ನು ಕೆರೆ, ನಾಲೆ ಮತ್ತು ನದಿಗಳಿಂದ ಲಭ್ಯವಿರುವ ನೀರನ್ನು ಉಪಯೋಗಿಸಿಕೊಳ್ಳುವುದರಿಂದ ಅಂತಹ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಸುವಂತೆ ಕೋರಿರುತ್ತಾರೆ. ಆದ್ದರಿಂದ ಅಂತಹ ಅರ್ಜಿದಾರರು ವಿದ್ಯುತ್ ಸಂಪರ್ಕ ಕೋರಿ ಅರ್ಜಿ ನೋಂದಾಯಿಸಿದರೆ ಅಂತಹ ಅರ್ಜಿಗಳನ್ನು ಪರಿಶೀಲಿಸಿ, ಧೃಡೀಕರಿಸಿಕೊಂಡು ಅಗತ್ಯ ದಾಖಲೆಗಳನ್ನು ಸಂಬಂಧಿಸಿದ ಇಲಾಖೆಯಿಂದ ಪಡೆದು ಅರ್ಜಿದಾರರು ಮಂಡಳಿಯ ನಿಯಮಗಳನ್ನು ಪಾಲಿಸಿದ ನಂತರ ಸದರೀ ನೀರಾವರಿ ಪಂಪುಸೆಟ್ಟುಗಳಿಗೆ "ಮಾರ್ಪಡಿಸಿದ ಸ್ವಯಂ ಆರ್ಥಿಕ ನೆರವು ಯೋಜನೆ"ಯಡಿಯಲ್ಲಿ ವಿದ್ಯುತ್ ಪೂರೈಸಲು ಅವಕಾಶ ಕೊಡಲಾಗಿದೆ. ಹಾಗೂ ಉಳಿದ ಎರಡು ತಾಲ್ಲೂಕುಗಳಾದ ಚಿಕ್ಕನಾಯಕನಹಳ್ಳಿ ಮತ್ತು ಪಾವಗಡ ಬಿಳಿ ತಾಲ್ಲೂಕುಗಳಾಗಿರುವುದರಿಂದ ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಮಂಡಳಿಯ ನಿಯಮಗಳ ಪ್ರಕಾರ ವಿದ್ಯುತ್‌ಸಂಪರ್ಕ ನೀಡಲಾಗುತ್ತಿದೆ.

ಆ) ಅಂತರ್ಜಲ ಸಂಪನ್ಮೂಲದ ಹೆಚ್ಚುವರಿ ದುರುಪಯೋಗವನ್ನು ಮತ್ತು ಜಲಮಮಟ್ಟವು ಇನ್ನೂ ಕೆಳಮಟ್ಟಕ್ಕೆ ಇಳಿಯದಂತೆ ತಡೆಗಟ್ಟಲು ಸರ್ಕಾರವು ಈ ಮೇಲಿನಂತೆ ತೀರ್ಮಾನವನ್ನು ಕೈಗೊಂಡಿತು. ಆದುದರಿಂದ ಕಪ್ಪು ತಾಲ್ಲುಕುಗಳಲ್ಲಿರುವ ಅಂತಹ ನೀರಾವರಿ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಲು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

L·A·8370·14·